
# ಎಲ್ಲಾ ಸಿನಿಮಾ ಪ್ಯಾನ್ ಇಂಡಿಯಾ ಆಗಬೇಕಿಲ್ಲ: ನೀನಾಸಂ ಸತೀಶ್



ಸಿನಿಮಾರಂಗಕ್ಕೆ ಬಂದು ಹತ್ತಿರತ್ತಿರ ಹತ್ತು ವರ್ಷಗಳನ್ನು ಪೂರೈಸಿರುವ ನಟ ನೀನಾಸಂ ಸತೀಶ್, ಚಿತ್ರರಂಗದಲ್ಲಿನ ತಮ್ಮ ಮೊದಲ ಹೆಜ್ಜೆಗಳನ್ನು ನೆನಪಿಸಿಕೊಳ್ಳುತ್ತಲೇ ಭವಿಷ್ಯದ ಕುರಿತ ಕನಸುಗಳ ಬಗ್ಗೆಯೂ ಮಾತನಾಡಿದ್ದಾರೆ. ಶೀಘ್ರವೇ ಐತಿಹಾಸಿಕ ಸಿನಿಮಾ ಮಾಡುವ ತಮ್ಮ ಆಲೋಚನೆಯನ್ನೂ ಹಂಚಿಕೊಂಡಿದ್ದಾರೆ.

ಇದೇ ಸಂದರ್ಭ, ನಿರ್ದೇಶಕ ಯೋಗರಾಜ್ ಭಟ್ ಹಾಗೂ ದುನಿಯಾ ಸೂರಿ ಅವರನ್ನು ನೆನೆದಿರುವ ಅವರು, 'ನನ್ನನ್ನು ಹೀರೊ ಎಂದು ಬಿಂಬಿಸಲು ನೆರವಾದ ಇವರಿಬ್ಬರಿಗೂ ಕ್ರೆಡಿಟ್ ಹೋಗಬೇಕು. ಈ ಹತ್ತು ವರ್ಷಗಳಲ್ಲಿ ಪ್ರೇಕ್ಷಕರು ನನ್ನೊಂದಿಗೆ ನಿಂತಿದ್ದಾರೆ. ಸದ್ಯದ ಸಿನಿಮಾರಂಗದ ಸ್ಪರ್ಧೆಯಲ್ಲಿ ಇದು ಸುಲಭದ ಮಾತಲ್ಲ. ಹೀರೊ ಆಗಿ ನಾನು 13 ಸಿನಿಮಾಗಳನ್ನು ಮಾಡಿದ್ದೇನೆ. ಈ ಯಶಸ್ಸಿನ ಗ್ರಾಫ್ ನನಗೆ ಸಂತಸವನ್ನೂ ನೀಡಿದೆ' ಎಂದು ಖುಷಿಯಿಂದ ಹೇಳಿಕೊಂಡಿದ್ದಾರೆ.

ಸಿನಿಮಾರಂಗದಲ್ಲಿ ಈಗಿನ ಟ್ರೆಂಡ್ ಆಗಿರುವ 'ಪ್ಯಾನ್ ಇಂಡಿಯಾ' ಕುರಿತು ಮಾತನಾಡಿ, 'ಎಲ್ಲಾ ಸಿನಿಮಾವನ್ನು ಪ್ಯಾನ್ ಇಂಡಿಯಾ ಮಾಡುವ ಅವಶ್ಯಕತೆಯಿಲ್ಲ. ಕಂಟೆಂಟ್ ಆಧಾರದಲ್ಲಿ ಆಯ್ಕೆ ಮಾಡಿಕೊಂಡರೆ ಒಳಿತು. ಏಕೆಂದರೆ, ಒಮ್ಮೆ ಪ್ಯಾನ್ ಇಂಡಿಯಾ ಸಿನಿಮಾ ಎಂದು ನಿರ್ಧರಿಸಿದ ಮೇಲೆ, ಬಜೆಟ್ ಇದ್ದಕ್ಕಿದ್ದಂತೆ ಏರಿಬಿಡುತ್ತದೆ. ಈ ವಿಷಯದಲ್ಲಿ ಜಾಗರೂಕರಾಗಿರದಿದ್ದರೆ ದೊಡ್ಡ ಹಿನ್ನಡೆಯೇ ಆಗಿಬಿಡಬಹುದು' ಎಂದಿದ್ದಾರೆ.



# ಬೆಂಗಳೂರು ಚೆಂದ ಎಂದ ಅಮೃತಾ

ಮೈಸೂರು ಹುಡುಗಿ ಅಮೃತಾ ಅಯ್ಯಂಗಾರ್, ತಮ್ಮ ಸಿನಿಮಾ ಕನಸನ್ನು ನನಸು ಮಾಡಿಕೊಳ್ಳಲೆಂದೇ ಕೆಲ ವರ್ಷಗಳ ಹಿಂದೆ ಬೆಂಗಳೂರು ಹಾದಿ ಹಿಡಿದವರು. ಈಗ ಈ ಮಹಾನಗರ ಅವರ ಎರಡನೇ ಮನೆ ಆಗಿಹೋಗಿದೆ. ತಮ್ಮನ್ನು ಇಷ್ಟು ಪ್ರೀತಿಯಿಂದ ಸಲಹುತ್ತಿರುವ ಬೆಂಗಳೂರೆಂಬ ಮಾಯಾನಗರಿ ಬಗ್ಗೆ ತುಂಬು ಉತ್ಸಾಹದಿಂದ ಮಾತನಾಡಿದ್ದಾರೆ ಅಮೃತಾ.

'ನಾನು ಇಲ್ಲಿಗೆ ಬಂದ ದಿನದಿಂದ, ಈ ನಗರದಲ್ಲಿ ಉತ್ಸಾಹದ ಒಂದು ವೈಬ್ ಇರುವುದು ಅನುಭವಕ್ಕೆ ಬಂತು. ಬೇಗನೆ ಎದ್ದು ಕೆಲಸಕ್ಕೆ ಹೊರಡಬೇಕು, ಏನಾದರೂ ಸಾಧಿಸಬೇಕು ಎಂಬ ಉತ್ಸಾಹವನ್ನು ಪ್ರಚೋದಿಸುವಂಥ ನಗರವಿದು' ಎಂದು ಹಾಡಿ ಹೊಗಳಿದ್ದಾರೆ.

'ಮಹಿಳೆಯರಿಗೆ ಗೌರವ, ಭದ್ರತೆ ಇರುವ ಸ್ಥಳವಾಗಿಯೂ ನನಗೆ ಬೆಂಗಳೂರು ಕಾಣುತ್ತದೆ. ಮೈಸೂರಿನಲ್ಲಿ ರಾತ್ರಿ 9.30 ಆಗುತ್ತಿದ್ದಂತೆ ಎಲ್ಲವೂ ಸ್ತಬ್ಧಗೊಳ್ಳುತ್ತದೆ. ಆದರೆ ಬೆಂಗಳೂರಿನಲ್ಲಿ 10.30ರ ನಂತರ ಹೊಸ ಪಾಳಿ ಆರಂಭವಾಗಿರುತ್ತದೆ. ದೀರ್ಘಾವಧಿ ಕೆಲಸ ಮಾಡುವ ಅತಿ ಹೆಚ್ಚು ಜನರನ್ನು ಬೆಂಗಳೂರು ಹೊಂದಿದೆ ಎಂಬುದನ್ನು ಒಪ್ಪಲೇಬೇಕು. ತಡರಾತ್ರಿ ಹೊರಹೋದರೂ ರಸ್ತೆಗಳಲ್ಲಿ ಜನರು ಕಾಣಸಿಗುತ್ತಾರೆ. ಭಯ ಅನ್ನಿಸುವುದಿಲ್ಲ' ಎಂದು ಪ್ರೀತಿಯ ಮಾತುಗಳನ್ನಾಡಿದ್ದಾರೆ.

ಬೆಂಗಳೂರಿನಲ್ಲಿ ಏನೇನು ಇಷ್ಟ, ಏನೇನು ನೋಡಬಹುದು ಎಂದು ಸಲಹೆಗಳನ್ನೂ ಅವರು ನೀಡಿದ್ದಾರೆ. 'ಬೆಂಗಳೂರಿನಲ್ಲಿ ಹಸುರು ಕಣ್ತುಂಬಿಕೊಳ್ಳಬೇಕೆಂದರೆ, ಲಾಲ್‌ಬಾಗ್ ಅಥವಾ ಕಬ್ಬನ್ ಪಾರ್ಕ್‌ಗೆ ಹೋಗಬಹುದು. ಹಳೇ ಬೆಂಗಳೂರನ್ನು ಅನ್ವೇಷಿಸಬಹುದು. ದೊಡ್ಡ ದೊಡ್ಡ ಮರಗಳು, ಹಳೇ ಮನೆಗಳನ್ನು ಹೊಂದಿರುವ ರಸ್ತೆಗಳು ಈಗಲೂ ಇವೆ. ಇವೆಲ್ಲದರ ಜೊತೆ, ವಿಧವಿಧದ ದೋಸೆಗಳು, ರುಚಿಕರ ಕಾಫಿಯಂಥ ಲೋಕಲ್ ಆಹಾರಗಳು ಈಗಲೂ ಬೆಂಗಳೂರಿನ ಘಮಲನ್ನು ಹರಡುತ್ತಿವೆ. ಇಲ್ಲಿನ ನೈಟ್‌ಲೈಫ್ ಮತ್ತೂ ಒಂದು ಲೋಕ' ಎಂದು ಬೆಂಗಳೂರನ್ನು ತಮ್ಮ ಮಾತುಗಳಲ್ಲೇ ವರ್ಣಿಸಿದ್ದಾರೆ ಅಮೃತಾ.